# ಹೆದ್ದಾರಿಯಲ್ಲಿ ಮದ್ಯದಂಗಡಿ

ದೇಶದಲ್ಲಿ ಪ್ರತಿ ವರ್ಷ 1.5 ಲಕ್ಷ ಜನ ರಸ್ತೆ ಅಪಘಾತಗಳಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇದರಲ್ಲಿ ಬಹುಪಾಲು ಅಪಘಾತಗಳು ನಡೆಯುತ್ತಿರುವುದು ಹೆದ್ದಾರಿಗಳಲ್ಲಿ. ಮಿತಿ ಮೀರಿದ ವೇಗ ಮತ್ತು ಕುಡಿದು ವಾಹನ ಚಲಾಯಿಸುವುದು ಈ ಅಪಘಾತಗಳಿಗೆ ಮುಖ್ಯ ಕಾರಣ. ಇದಿಷ್ಟು ಅಂಕಿ ಅಂಶಗಳ ಆಧಾರದ ಮೇಲೆ ಸುಪ್ರೀಂಕೋರ್ಟ್ ಇತ್ತೀಚೆಗೆ ಕಂಡುಕೊಂಡ ಸತ್ಯ. ರಸ್ತೆ ಅಪಘಾತಗಳನ್ನು ತಪ್ಪಿಸಲು ಸರಕಾರ ಏನು ಕ್ರಮಗಳನ್ನು ಕೈಗೊಂಡಿದೆ? ರಸ್ತೆ ಅಗಲೀಕರಣ, ಸೂಕ್ತ ಫಲಕ, ತಡೆಗಳನ್ನು ಅಳವಡಿಸುವುದು, ಕುಡಿದು ವಾಹನ ಚಲಾಯಿಸುವವರಿಗೆ ಭಾರೀ ಪ್ರಮಾಣದ ದಂಡ ವಿಧಿಸುವುದು, ರಸ್ತೆ ನಿಯಮಗಳನ್ನು ಉಲ್ಲಂಘಿಸಿದವರನ್ನು ಕಠಿಣ ಶಿಕ್ಷೆಗೆ ಗುರಿ ಪಡಿಸುವುದು, ಪಾದಚಾರಿಗಳ ಸುರಕ್ಷತೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು– ಹೀಗೆ ನೂರೆಂಟು ಕ್ರಮಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಲ್ಲದೆ ಸ್ಥಳೀಯ ಆಡಳಿತ ಸಂಸ್ಥೆಗಳೂ ಕೈಗೊಂಡಿವೆ. ಆದರೆ ಇಷ್ಟಾಗಿಯೂ ರಸ್ತೆ ಅಪಘಾತಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿಲ್ಲವೇಕೆ? ಈ ಹಿನ್ನೆಲೆಯಲ್ಲೇ ಹಲವಾರು ಸಂಘ – ಸಂಸ್ಥೆಗಳು ಮತ್ತು ಸಾರ್ವಜನಿಕರು ವಿವಿಧ ಹೈಕೋರ್ಟ್‌ಗಳ ಮೊರೆ ಹೋಗಿದ್ದರು. ಹೆದ್ದಾರಿ ಬದಿಯಲ್ಲಿರುವ ಮದ್ಯದಂಗಡಿಗಳು ಮತ್ತು ಬಾರ್‌ಗಳನ್ನು ತೆರವುಗೊಳಿಸಿ ಎನ್ನುವುದು ಸಾರ್ವಜನಿಕರ ಒತ್ತಾಯವಾಗಿತ್ತು. ಹಲವೆಡೆ ಈ ಬಗ್ಗೆ ಜನರು ಬೀದಿಗಿಳಿದು ಪ್ರತಿಭಟಿಸಿದ್ದರು. ಸಾರ್ವಜನಿಕರ ಈ ಎಲ್ಲ ಅರ್ಜಿಗಳನ್ನು ಗಮನಿಸಿದ ಸುಪ್ರೀಂಕೋರ್ಟ್ ಇದೀಗ ಒಂದು ಮಹತ್ವದ ತೀರ್ಪು ನೀಡಿದೆ. ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಪಕ್ಕದಲ್ಲಿ ಯಾವುದೇ ಮದ್ಯದಂಗಡಿಗಳು ಮತ್ತು ಬಾರ್ ಅಂಡ್ ರೆಸ್ಟೋರೆಂಟ್‌ಗಳು ಇರುವಂತಿಲ್ಲ. ಈಗ ಇರುವ ಮದ್ಯದಂಗಡಿ ಮತ್ತು ಬಾರ್‌ಗಳ ಲೈಸೆನ್ಸ್‌ಗಳನ್ನು 2017ರ ಮಾರ್ಚ್ ಬಳಿಕ ನವೀಕರಣ ಮಾಡುವಂತಿಲ್ಲ ಎಂದು ಸುಪ್ರೀಂಕೋರ್ಟ್ ಆದೇಶ ಹೊರಡಿಸಿದೆ.

ಜನರು ಕುಡಿಯಬಾರದು ಎಂದು ಸುಪ್ರೀಂಕೋರ್ಟ್ ಹೇಳಿಲ್ಲ. ಜನರನ್ನು ಪೂರ್ಣವಾಗಿ ಕುಡಿತದಿಂದ ಪಾರು ಮಾಡುವುದಕ್ಕೆ ಸರ್ಕಾರಗಳಿಗೂ ಸಾಧ್ಯವಿಲ್ಲ. ಬಿಹಾರದಲ್ಲಿ ಪಾನನಿಷೇಧ ಜಾರಿಗೆ ತಂದ ಬಳಿಕ ಹಳ್ಳಿಗಳಲ್ಲಿ ಕೆಲವೆಡೆ ಕುಡಿತ ಚಟವಾಗಿರುವ ಎಷ್ಟೋ ಮಂದಿ ಬಟ್ಟೆ ಒಗೆಯುವ ಸೋಪುಗಳನ್ನು ತಿನ್ನತೊಡಗಿದ್ದಾರೆ ಎಂದು ಇತ್ತೀಚೆಗೆ ವರದಿ ಬಂದಿತ್ತು. ಆದರೆ ಇಲ್ಲಿ ಕುಡಿದು ವಾಹನಗಳನ್ನು ಚಲಾಯಿಸುವ ಮಂದಿ ಅಪಘಾತಗಳ ಮೂಲಕ ಪ್ರಾಣ ಕಳೆದುಕೊಳ್ಳುವುದು ಮತ್ತು ಇತರರ ಪ್ರಾಣಗಳನ್ನು ತೆಗೆಯುವ ಗಂಭೀರ ವಿದ್ಯಮಾನಗಳನ್ನು ತಡೆಗಟ್ಟಲೇಬೇಕಿದೆ. ಕುಡಿತದ ಮೇಲೆ ಸರ್ಕಾರಗಳು ನಿಯಂತ್ರಣ ಹೇರಬಹುದು ಎಂದು ಸುಪ್ರೀಂಕೋರ್ಟ್ ಸೂಚಿಸಿದೆ. ಕಳೆದ 10 ವರ್ಷಗಳಲ್ಲಿ ಸಂಭವಿಸಿದ ರಸ್ತೆ ಅಪಘಾತಗಳು ಮತ್ತು ಉಂಟಾದ ಪ್ರಾಣಹಾನಿಗಳನ್ನು ಗಮನಿಸಿರುವ ಸುಪ್ರೀಂಕೋರ್ಟ್, ಇಷ್ಟು ವರ್ಷಗಳಲ್ಲಿ ಕುಡಿದು ವಾಹನ ಚಲಾಯಿಸುವುದನ್ನು ತಡೆಗಟ್ಟಲು ಸರ್ಕಾರಗಳು ಕೈಗೊಂಡ ಕ್ರಮಗಳು ಏನೇನೂ ಸಾಲದು ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

‘ಹೆದ್ದಾರಿ ಬದಿಯಲ್ಲಿರುವ ಮದ್ಯದಂಗಡಿಗಳನ್ನು ಬಂದ್ ಮಾಡಿದರೆ ಸರ್ಕಾರದ ಆದಾಯ ಕಡಿಮೆಯಾಗುತ್ತದೆ. ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಮದ್ಯದಂಗಡಿಗಳಿಂದ ಬರುವ ಆದಾಯ ಬಹುಮುಖ್ಯವಾದದ್ದು’ ಎಂದು ಸರ್ಕಾರದ ಪರವಾಗಿ ಸುಪ್ರೀಂಕೋರ್ಟಿನ ಮುಂದೆ ವಾದ ಮಂಡಿಸಲಾಗಿತ್ತು. ಈ ವಾದವನ್ನು ಸುಪ್ರೀಂಕೋರ್ಟ್ ಒಪ್ಪಿಲ್ಲ. ಸರ್ಕಾರಕ್ಕೆ ಕೆಲವು ಲಕ್ಷ ರೂಪಾಯಿಗಳ ಆದಾಯ ಬರುತ್ತದೆಂದು ಜನರ ಪ್ರಾಣವನ್ನು ಪಣವಾಗಿಡುವುದು ಎಳ್ಳಷ್ಟೂ ಸರಿಯಲ್ಲ ಎಂದು ಕೋರ್ಟ್ ಹೇಳಿದೆ. ಪಂಜಾಬ್ ಸರ್ಕಾರದ ಈ ರೀತಿಯ ವಾದವನ್ನು ಕಟುವಾಗಿ ಟೀಕಿಸಿರುವ ನ್ಯಾಯಾಧೀಶರು, ‘ಮದ್ಯದ ಲಾಬಿ ಖುಷಿಯಾಗಿದೆ. ಅಬ್ಕಾರಿ ಇಲಾಖೆ ಮತ್ತು ಸಚಿವರೂ ಖುಷಿಯಾಗಿದ್ದಾರೆ. ಸರ್ಕಾರಕ್ಕೆ ದುಡ್ಡು ಬರುತ್ತದೆ. ಆದರೆ ನೀವು ಜನರಿಗೆ ನೆರವಾಗುವಂತಹ ನಿಲುವನ್ನು ತೆಗೆದುಕೊಳ್ಳಬೇಕು’ ಎಂದು ಕೋರ್ಟ್ ಕಿವಿಮಾತು ಹೇಳಿದೆ. ಆದಾಯ ಬರುತ್ತದೆ ಎನ್ನುವುದು ಬಹುತೇಕ ಎಲ್ಲ ರಾಜ್ಯ ಸರ್ಕಾರಗಳೂ ಹೇಳುವ ಮಾತು. ಹಾಗೆಂದೇ ಕೋರ್ಟ್ ಬುದ್ಧಿವಾದವನ್ನು ಎಲ್ಲರೂ ಗಂಭೀರವಾಗಿ ಪರಿಗಣಿಸಬೇಕಿದೆ.

ಇತ್ತೀಚಿನ ದಿನಗಳಲ್ಲಿ ಕೋರ್ಟ್‌ಗಳು ಕಾರ್ಯಾಂಗದ ಕರ್ತವ್ಯಗಳ ಮೇಲೆ ಸವಾರಿ ಮಾಡುತ್ತಿವೆ ಎನ್ನುವವರೂ ಇದ್ದಾರೆ. ಆದರೆ ಸರ್ಕಾರಗಳು ಪ್ರಜೆಗಳ ಹಿತಾಸಕ್ತಿಯ ಹಿನ್ನೆಲೆಯಲ್ಲಿ ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಲಿಲ್ಲ ಎಂದಾದಲ್ಲಿ ಕೋರ್ಟ್‌ಗಳ ಹಸ್ತಕ್ಷೇಪ ಅನಿವಾರ್ಯವೇ ಆಗುತ್ತದೆ. ರಸ್ತೆ ಅಪಘಾತಗಳಲ್ಲಿ ಜನರು ಪ್ರಾಣ ಕಳೆದುಕೊಳ್ಳುವುದನ್ನು ನೋಡಿ ಸರ್ಕಾರಗಳು ಕೈಕಟ್ಟಿ ಕುಳಿತುಕೊಳ್ಳುವುದು ಎಷ್ಟು ಸರಿ? ಕೋರ್ಟ್ ಆದೇಶವನ್ನು ಸರ್ಕಾರಗಳು ಕಟ್ಟುನಿಟ್ಟಾಗಿ ಜಾರಿಗೆ ತರಲಿ.

**■ ಬಿ.ಎಂ.ಹನೀಫ್**

ಕಾರ್ಯಾಂಗದ ಕೆಲಸದಲ್ಲಿ ಕೋರ್ಟ್‌ಗಳು ಹಸ್ತಕ್ಷೇಪ ಮಾಡುವುದು ಇತ್ತೀಚೆಗೆ ಹೆಚ್ಚಾಗಿದೆ ಎನ್ನುವುದೇನೋ ಸರಿಯೇ. ಆದರೆ ಸರ್ಕಾರಗಳು ಪ್ರಜೆಗಳ ಹಿತದೃಷ್ಟಿಯಿಂದ ನಿರ್ಧಾರಗಳನ್ನು ಕೈಗೊಳ್ಳದಿದ್ದರೆ ಕೋರ್ಟ್‌ಗಳ ಹಸ್ತಕ್ಷೇಪ ಅನಿವಾರ್ಯವೇ ಆಗುತ್ತದೆ.




ಈಶ್ವರ್